ದಿನಾಂಕ:10/09/2025 ಓ ಎಸ್.225/2024 ಪಿ ಡಬ್ಲೂ-01

**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು:**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಕೆ ಇ ಓ ವಕೀಲರಿಂದ:**

1. ನಾನು ಮತ್ತು ಪ್ರತಿವಾದಿ ಒಂದೇ ಊರಿನವರು ಅಲ್ಲ ಎಂದರೆ ಹೌದು.

ನನ್ನ ಮತ್ತು ಪ್ರತಿವಾದಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಹೌದು. ಹಣಕಾಸಿನ ವ್ಯವಹಾರ ಮಾಡುವಾಗ ಪ್ರತಿವಾದಿಗೆ ಇದ್ದ ಜಮೀನು ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಹೌದು. ಪ್ರತಿವಾದಿಯರು ಹಣಕಾಸಿನಲ್ಲಿ ಚೆನ್ನಾಗಿ ಇದ್ದಾರೆ ಎಂದರೆ ಇಲ್ಲ. ನನ್ನ ಮಗಳು ಮತ್ತು ಪ್ರತಿವಾದಿ ನಡುವೆ ಹಣಕಾಸಿನ ವ್ಯವಹಾರ ನಡೆದಿದೆ ಎಂದರೆ ಇಲ್ಲ. ನಾನು ನನ್ನ ಮಗಳ ಮನೆಗೆ ಹೋಗುವುದು ಮತ್ತು ನನ್ನ ಮಗಳು ಕೂಡ ನನ್ನ ಮನೆಗೆ ಬರುವುದು ಮಾನವೀಯ ರೀತಿಯಲ್ಲಿ ಮಾಡುತ್ತೇವೆ ಎಂದರೆ ಅಪರೂಪಕ್ಕೆ ಬಂದು ಹೋಗವುದು ಮಾಡುತ್ತೇವೆ ಎಂದು ಹೇಳುತ್ತಾರೆ. ನನ್ನ ಮಗಳು ಮತ್ತು ಪ್ರತಿವಾದಿಯ ನಡುವೆ ಒಂದು ಸೇಲ್ ಅಗ್ರಿಮೆಂಟ್ ಆಗಿದ್ದು ನನ್ನ ಮನೆಯಲ್ಲಿ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಎಂದೂ ನಾನು ಅಳಗವಾಡಿಯಲ್ಲಿ ವಾಸ ಇಲ್ಲ ಎಂದರೆ ಸರಿಯಲ್ಲ. ಅಳಗವಾಡಿಯಲ್ಲಿ ವಾಸ ಇದ್ದಿದಕ್ಕೆ ಈ ವ್ಯವಹಾರ ಗೊತ್ತು ಎಂದರೆ ಸರಿಯಲ್ಲ. ಈ ವಿಚಾರ ನನ್ನ ಮಗಳಿಗೆ ಗೊತ್ತಿಲ್ಲ. ನಿಪಿ.1 ಎಲ್ಲಿ ಬರೆಸಿದ್ದಾರೆ ನನಗೆ ಗೊತ್ತಿಲ್ಲ. ಎಲ್ಲಿ ಬರೆಸಿದ್ದಾರೆ ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೀರಾ ಎಂದರೆ ಬರೆದಿರುವುದು ಮಾತ್ರ ಗೊತ್ತು. ನಿಪಿ.1 ಯಾರು ಯಾರಿಗೆ ಬರೆದುಕೊಟ್ಟಿದ್ದಾರೆ ತಿಳಿದುಕೊಂಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ನಿಪಿ.1 ಆಗುವ ಕಾಲಕ್ಕೆ ವಕೀಲರು ಇದ್ದರಾ ಎಂದರೆ ನನಗೆ ಗೊತ್ತಿಲ್ಲ. ನಿಪಿ.1 ಹನುಮಂತಪ್ಪರವರು ಬರೆಸಿ ತಂದು ಕೊಟ್ಟಿರುತ್ತಾರೆ. ಒಂದು ದಾಖಲೆ ಬರೆದುಕೊಟ್ಟಾಗ ಬರೆಸಿದವರು ಮತ್ತು ಬರೆದುಕೊಟ್ಟವರು ಸಹಿ ಸಾಮಾನ್ಯ ಎಂದರೆ ಹೌದು.

2. ಪ್ರಾಮಿಸರಿ ಪತ್ರ ಪ್ರಕಾಶ್ ಮತ್ತು ಹನನುಮಂತಪ್ಪ ಬರೆದುಕೊಟ್ಟರಾ ಎಂದರೆ ಹೌದು. ನಿಪಿ.1 ಕ್ಕೆ 3 ನೇ ಪ್ರತಿವಾದಿ ಸಹಿ ಯಾಕೆ ಪಡೆದಿಲ್ಲ ಎಂದರೆ ಅವರೂ ಕೂಡ 1 ನೇ ಪ್ರತಿವಾದಿಯಾದ ಹನುಮಂತಪ್ಪರವರ ಮಗನೇ ಆದ್ದರಿಂದ ಎಂದು ಹೇಳುತ್ತಾರೆ. ಈ ಪ್ರಾಮಿಸರಿ ಪತ್ರಕ್ಕೆ 3 ನೇ ಪ್ರತಿವಾದಿ ಹೆಸರು ಯಾಕೆ ಬರೆಸಿಕೊಂಡು ಬಂದಿಲ್ಲ ಅಂತ ಕೇಳಿದಿರಾ ಎಂದರೆ ಇಲ್ಲ. ಪ್ರಾಮಿಸರಿ ಪತ್ರ ಬರೆಯಲು ನಾವೇ ಮಾಹಿತಿ ಹೇಳಿ ಬರೆಸಿರುತ್ತೇವೆ. ಪ್ರಾಮಿಸರಿ ಪತ್ರದಲ್ಲಿ ವಿಳಾಸ ದಾವಣಗೆರೆ

ಜಿಲ್ಲೆ , ಜಗಳೂರು ತಾಲ್ಲೂಕು, ಬಿಳಿಚೋಡು ಅಂತ ಇದೆ ಎಂದರೆ ನಾವು ವಾಸ ಇರುವುದು ಅಳಗವಾಡಿ ಎಂದು ಹೇಳುತ್ತಾರೆ. ನಾನು ಅಳಗವಾಡಿಯಲಿ ವಾಸ ಇದ್ದೇನೆ ಅಂತ ತೋರಿಸಲು ಬೇಕಾದಷ್ಟು ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಎಂದೂ ಅಳಗವಾಡಿಯಲ್ಲಿ ವಾಸ ಇಲ್ಲ ಎಂದರೆ ಸುಳ್ಳು. ನಿಪಿ.1 ಎಷ್ಟು ಗಂಟೆಗೆ ಬರೆದಿದ್ದಾರೆ ಎಂದರೆ ಸಮಯ ಇಷ್ಟೆ ಅಂತ ಹೇಳಲು ನೆನಪಿಲ್ಲ. ಈ ವ್ಯವಹಾರ ಅಳಗವಾಡಿ ಗ್ರಾಮದಲ್ಲಿ ನಡೆದಿಲ್ಲ ಎಂದರೆ ಸರಿಯಲ್ಲ.

3. ನಾನು 500 ರೂಪಾಯಿ ಮುಖಬೆಲೆಯ ನೋಟುಗಳನ್ನು ಕೊಟ್ಟಿರುತ್ತೇನೆ. ಪ್ರಾಮಿಸರಿ ಪತ್ರಕ್ಕೆ ಎರಡನೇ ಪುಟದಲ್ಲಿ ಹಣ ಪಡೆದವರ ಕಡೆ ರುಜು ಮಾಡಿದ ಕೆಳಗಡೆ ಪೆನ್ಸಿಲ್ ನಿಂದ ಮಾರ್ಕ್ ಮಾಡಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಈ ವಿಚಾರ ನನಗೆ ಪೂರ್ಣವಾಗಿ ನನಗೆ ಗೊತ್ತಿದೆ ಈ ಪ್ರಾಮಿಸರಿ ಪತ್ರ ನಾನೇ ಬರಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಾಮಿಸರಿ ಪತ್ರ ಯಾರು ತಂದರು ನನಗೆ ಗೊತ್ತಿಲ್ಲ. ಹಣಕಾಸಿನ ವ್ಯವಹಾರ ಚಿತ್ರದುರ್ಗದಲ್ಲಿ ಮಾಡುತ್ತಾರೆ ಎಂದರೆ ಹಾಗೇನಿಲ್ಲ. ಪತ್ರ ತಂದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಇಲ್ಲ. ನಿಪಿ.1 ಕ್ಕೆ ನಾವೇ ಪೇಪರ್ ಅಡ್ಜಸ್ಟಮೆಂಟ್ ಮಾಡಿ ಟೈಪ್ ಮಾಡಿಸಿದ್ದೇನೆ ಎಂದರೆ ಇಲ್ಲ. ಈ ಪ್ರಾಮಿಸರಿ ನೋಟ್ ಗೂ ಮತ್ತು ಹಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪ್ರಾಮಿಸರಿ ನೋಟ್ ನಲ್ಲಿ ಹಣದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಾಮಿಸರಿ ವ್ಯವಹಾರ ನನಗೆ ಎಲ್ಲಿ ನಡೆದಿದೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಹಣವನ್ನು ನಾನು ಬೇರೆಯವರ ಕಡೆಯಿಂದ ಪಡೆದಿಲ್ಲ. ಬಡ್ಡಿ ಹಣದ ವಿಚಾರ ಪ್ರತಿವಾದಿಯರಿಗೆ ಬೇಕಾದಷ್ಟು ಸಲ ಕೇಳಿರುತ್ತೇನೆ. ಆ ರೀತಿ ಕೇಳಿದಾಗ ಪ್ರತಿವಾದಿ ಏನು ಹೇಳಿದ್ದರು ಎಂದರೆ ಇವತ್ತು ಕೊಡುತ್ತೇನೆ , ನಾಳೆ ಕೊಡುತ್ತೇನೆ ಅಂತ ಒಂದಲ್ಲ ಒಂದು ಕಾರಣ ಹೇಳಿದರು. ಪ್ರತಿವಾದಿಗೂ ನನಗೂ ಯಾವುದೇ ಹಣಕಾಸಿನ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಹಿಂದೆ ನನ್ನ ಮಗಳ ಹತ್ತಿರ ಆದ ವ್ಯವಹಾರಕ್ಕೆ ನೀಡಿದ ದಾಖಲೆಯನ್ನು ನಾನು ದುರ್ಲಾಬ ಪಡೆಯುವ ಉದ್ದೇಶದಿಂದ ಈ ಕೇಸ್ ನಲ್ಲಿ ಪರಿಹಾರ ಪಡೆಯುವ

ಉದ್ದೇಶದಿಂದ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರು ಸೇರಿ ಸುಳ್ಳು ಪ್ರಮಾಣಪತ್ರ ನೀಡಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**
**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**